## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು: | ಶ್ರೀ ಮಧು ಜಿ. ಮಾದೇಗೌಡ |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 146(1367) |
| ಉತ್ತರಿಸಬೇಕಾದ ದಿನಾಂಕ: | 16.03.2026 |
| ಉತ್ತರಿಸುವ ಸಚಿವರು: | ಮಾನ್ಯ ಉನ್ನತ ಶಿಕ್ಷಣ ಸಚಿವರು |

**ಅ)** ರಾಜ್ಯದಲ್ಲಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಬಿ.ಇಡಿ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

2025-26ನೇ ಸಾಲಿನಲ್ಲಿ ಸರ್ಕಾರಿ ಕೋಟಾದಡಿ ಲಭ್ಯವಿರುವ ಬಿ.ಇಡಿ ಸೀಟುಗಳ ಭರ್ತಿ ಮಾಡುವ ಸಂಬಂಧ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಂದ ಸಲ್ಲಿಕೆಯಾದ NCTE ಸಂಸ್ಥೆಯಿಂದ ಮಾನ್ಯತೆ ಪಡೆದ ಹಾಗೂ ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆದ ಬಿ.ಇಡಿ ಕಾಲೇಜುಗಳ ವಿವರ

| ಕಾಲೇಜಿನ ವಿಧ | ಸಂಖ್ಯೆ |
|---|---|
| ಸರ್ಕಾರಿ | 09 |
| ಅನುದಾನಿತ | 50 |
| ಅನುದಾನ ರಹಿತ | 345 |

ಕಾಲೇಜುಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಿದೆ.

**ಆ)** ಸದರಿ ಕಾಲೇಜುಗಳಲ್ಲಿ ಪ್ರಸ್ತುತ ಪ್ರವೇಶಾತಿ ಶುಲ್ಕ ಎಷ್ಟಿದೆ; ಎಷ್ಟು ವರ್ಷಗಳಿಂದ ಇದೇ ಪ್ರವೇಶಾತಿ ಶುಲ್ಕವನ್ನೇ ಅನುಸರಿಸಿಕೊಂಡು ಬರಲಾಗುತ್ತಿದೆ; ಅದಕ್ಕೆ ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು)

ಸರ್ಕಾರದ ಅಧಿಸೂಚನೆ ಸಂಖ್ಯೆ: ED 131 URC 2000, ದಿನಾಂಕ:22-07-2000 ರನ್ವಯ ಬಿ.ಇಡಿ ಕಾಲೇಜುಗಳಲ್ಲಿ ಪ್ರಸ್ತುತದ ಪ್ರವೇಶ ಶುಲ್ಕ ಈ ಕೆಳಕಂಡಂತೆ ಇರುತ್ತದೆ.

**Fee Structure in Bed course in Government/University/Aided/Private college of Education**

| Sl. No. | Types of Colleges | Category of Seats | Kinds of fee | | |
|---|---|---|---|---|---|
| | | | Tution | Development | Total |
| 1 | Government/ University | Government | 3000 | Nil | 3000 |
| 2 | Aided | Government seats | 3000 | 1000 | 4000 |
| | | Management seats | 8000 | 5000 | 13000 |
| 3 | Private (Un-Aided) | Government seats | 6000 | 2000 | 8000 |
| | | Management seats | 30000 | 5000 | 35000 |

Others fees in B.Ed courses (Common to all students in all institutions) is Rs.2125/-

**ಇ)** ಬಿ.ಇಡಿ ಕಾಲೇಜುಗಳ ಪ್ರವೇಶಾತಿ ಶುಲ್ಕವನ್ನು ಬಹಳಷ್ಟು ವರ್ಷಗಳಿಂದ ಪರಿಷ್ಕರಿಸದೇ ಇದ್ದು ಪ್ರವೇಶ ಶುಲ್ಕವನ್ನು ಪರಿಷ್ಕರಿಸಬೇಕೆಂಬ ಖಾಸಗಿ ಕಾಲೇಜುಗಳ ಕೋರಿಕೆಗೆ ಸರ್ಕಾರದ ಕ್ರಮವೇನು:

ಬಿ.ಇಡಿ ಕೋರ್ಸ್‌ಗಳ ಪ್ರವೇಶಾತಿಗೆ ಬೋಧನಾ ಶುಲ್ಕ, ಅಭಿವೃದ್ಧಿ ಶುಲ್ಕ ಮತ್ತು ಮತ್ತಿತರ ಶುಲ್ಕ ಪರಿಷ್ಕರಿಸುವುದಕ್ಕೆ ಸಂಬಂಧಿಸಿದಂತೆ, The National Council for Teacher Education (Guidelines for regulation of tuition fees and other fees chargeable by unaided teacher education institutions) Regulations-2000 and Amendment Regulations-2010ರ ತಿದ್ದುಪಡಿ ಅಧಿಸೂಚನೆಗಳನ್ವಯ ಸರ್ಕಾರದ ಆದೇಶ ಸಂಖ್ಯೆ:ಇಡಿ 57 ಯುಆರ್‌ಸಿ 2022(ಇ), ದಿನಾಂಕ:16-08-2025ರಲ್ಲಿ ದಿನಾಂಕ:22-07-2000ರ ಅಧಿಸೂಚನೆಯಲ್ಲಿನ ಪ್ರವೇಶಾತಿ ಶುಲ್ಕ ಪರಿಷ್ಕರಣೆಗೆ ರಾಜ್ಯಮಟ್ಟದ ಸಮಿತಿಯನ್ನು ರಚಿಸಿ ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿದೆ.

...2.

| | | |
|---|---|---|
| ಈ) | ಪ್ರವೇಶಾತಿ ಶುಲ್ಕ ಪರಿಷ್ಕರಣೆ ಸಂಬಂಧ ಸರ್ಕಾರ ರಚಿಸಿರುವ ರಾಜ್ಯ ಮಟ್ಟದ ಸಮಿತಿಯಲ್ಲಿ ಎಷ್ಟು ಮಂದಿ ಸದಸ್ಯರಿದ್ದಾರೆ; (ಆದೇಶ ಪ್ರತಿಯೊಂದಿಗೆ ಸಂಪೂರ್ಣ ವಿವರ ನೀಡುವುದು) | ಪ್ರವೇಶಾತಿ ಶುಲ್ಕ ಪರಿಷ್ಕರಣೆ ಸಂಬಂಧ ಸರ್ಕಾರ ರಚಿಸಿರುವ ರಾಜ್ಯ ಮಟ್ಟದ ಸಮಿತಿಯಲ್ಲಿ ಒಬ್ಬರು ಅಧ್ಯಕ್ಷರು, 05 ಜನ ಸದಸ್ಯರು ಹಾಗೂ ಒಬ್ಬರು ಸದಸ್ಯ ಕಾರ್ಯದರ್ಶಿಗಳು ಇರುತ್ತಾರೆ. **(ಅನುಬಂಧ-2)** |
| ಉ) | ಸದರಿ ಸಮಿತಿಗೆ ಎಷ್ಟು ಅವಧಿಯೊಳಗೆ ವರದಿ ಸಲ್ಲಿಸಲು ಕಾಲಮಿತಿ ನಿಗದಿಗೊಳಿಸಲಾಗಿತ್ತು; ಈ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ; ಸಲ್ಲಿಸಿದ್ದಲ್ಲಿ ಶಿಫಾರಸ್ಸಿನ ಪ್ರಮುಖಾಂಶಗಳೇನು; (ಸಂಪೂರ್ಣ ವಿವರನೀಡುವುದು) | ರಾಜ್ಯದ ಶಿಕ್ಷಣ ಮಹಾವಿದ್ಯಾಲಯಗಳಲ್ಲಿನ ಬಿ.ಇಡಿ. ಪದವಿ ಕೋರ್ಸುಗಳಿಗೆ ಶುಲ್ಕ ಪರಿಷ್ಕರಣೆ ಮಾಡಲು ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ, ಆರ್ಥಿಕ ಇಲಾಖೆ ಮತ್ತು ಕಾಲೇಜು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ದಿನಾಂಕ: 09.09.2025ರಂದು ಸಭೆ ನಡೆಸಲಾಗಿದ್ದು, ಸದರಿ ಸಭೆಯಲ್ಲಿ ಇತರೆ ರಾಜ್ಯಗಳ ಹಾಗೂ ನಮ್ಮ ರಾಜ್ಯದಲ್ಲಿರುವ ಇತರೆ ವೃತ್ತಿಪರ ಕೋರ್ಸುಗಳಿಗೆ ಪ್ರಸ್ತುತ ಸಂಗ್ರಹಿಸಲಾಗುತ್ತಿರುವ ಪ್ರವೇಶಾತಿ ಶುಲ್ಕಗಳ (Present Fee Structure) ಬಗ್ಗೆ ಚರ್ಚಿಸಲಾಗಿರುತ್ತದೆ. ಸದರಿ ಕೋರ್ಸುಗಳ ಮತ್ತು ವಿವಿಧ ರಾಜ್ಯಗಳ ಪ್ರವೇಶಾತಿ ಶುಲ್ಕವನ್ನು, ಪ್ರಸ್ತುತ ನಮ್ಮ ರಾಜ್ಯದಲ್ಲಿ ಬಿ.ಇಡಿ ಕಾಲೇಜುಗಳ ಪ್ರವೇಶಾತಿಗೆ ವಿಧಿಸಿರುವ ಶುಲ್ಕದೊಂದಿಗೆ ತುಲನೆ ಮಾಡಿ ಹಾಗೂ ಇನ್ನಿತರೆ ಅಂಶಗಳ ಬಗ್ಗೆ ಸಮಿತಿಯ ಎಲ್ಲ ಸದಸ್ಯರು ಕೂಲಂಕುಷವಾಗಿ ಪರಿಶೀಲಿಸಿ, ಇಲಾಖಾ ವ್ಯಾಪ್ತಿಗೊಳಪಡುವ ಬಿ.ಇಡಿ ಕಾಲೇಜುಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪ್ರವೇಶಾತಿ ಶುಲ್ಕವನ್ನು ಪರಿಷ್ಕರಿಸುವ ಸಂಬಂಧ ವರದಿ ನೀಡಿದ ಕೂಡಲೇ ಶುಲ್ಕ ಪರಿಷ್ಕರಣೆ ಕುರಿತು ಕ್ರಮವಹಿಸಲಾಗುವುದು. |
| ಊ) | ಸಮಿತಿಯ ಶಿಫಾರಸ್ಸುಗಳನ್ನು ಯಾವ ಶೈಕ್ಷಣಿಕ ವರ್ಷದಿಂದ ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆ? (ವಿವರ ನೀಡುವುದು) | ಶುಲ್ಕ ಪರಿಷ್ಕರಣೆ ಸಂಬಂಧ ರಚಿಸಿರುವ ಸಮಿತಿಯ ವರದಿ ಸ್ವೀಕೃತವಾದ ಕೂಡಲೇ, ಸಮಿತಿಯ ವರದಿಯನ್ನು ಪರಿಶೀಲಿಸಿ ಶುಲ್ಕ ಪರಿಷ್ಕರಣೆ ಕುರಿತು ನಿರ್ಧರಿಸಲಾಗುವುದು. |

ಇಡಿ 24 ಯುಇಸಿ 2026

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು

| District Wise Number Of BEd Colleges in- 2025 | | | | | |
|---|---|---|---|---|---|
| **Sl No** | **District name** | **Governament** | **Aided** | **Un-Aided** | **Total** |
| 1 | Bangalore Urban | 0 | 7 | 48 | 55 |
| 2 | Bangalore Rural | 0 | 0 | 6 | 6 |
| 3 | Chitradurga | 1 | 1 | 16 | 18 |
| 4 | Davanagere | 0 | 3 | 11 | 14 |
| 5 | Kolar | 0 | 1 | 14 | 15 |
| 6 | Shimoga | 0 | 2 | 11 | 13 |
| 7 | Tumkur | 0 | 4 | 12 | 16 |
| 8 | Chickkaballapura | 1 | 1 | 4 | 6 |
| 9 | Ramanagar | 0 | 0 | 5 | 5 |
| 10 | Bagalkote | 1 | 1 | 11 | 13 |
| 11 | Belgaum | 1 | 3 | 22 | 26 |
| 12 | Bijapur | 1 | 1 | 18 | 20 |
| 13 | Dharwad | 1 | 2 | 10 | 13 |
| 14 | Gadag | 0 | 1 | 9 | 10 |
| 15 | Haveri | 0 | 1 | 9 | 10 |
| 16 | Uttara Kannada | 0 | 2 | 6 | 8 |
| 17 | Bellary | 0 | 2 | 13 | 15 |
| 18 | Bidar | 0 | 2 | 29 | 31 |
| 19 | Gulbarga | 1 | 2 | 29 | 32 |
| 20 | Koppal | 0 | 1 | 7 | 8 |
| 21 | Raichur | 0 | 1 | 8 | 9 |
| 22 | Yadgiri | 0 | 1 | 4 | 5 |
| 23 | Chamaraja nagar | 0 | 0 | 2 | 2 |
| 24 | Chickmagalur | 0 | 1 | 5 | 6 |
| 25 | Dakshina Kannada | 1 | 1 | 9 | 11 |
| 26 | Hassan | 0 | 3 | 5 | 8 |
| 27 | Kodagu | 0 | 1 | 1 | 2 |
| 28 | Mandya | 0 | 1 | 10 | 11 |
| 29 | Mysore | 1 | 4 | 9 | 14 |
| 30 | Udupi | 0 | 0 | 2 | 2 |
| **Total** | | **9** | **50** | **345** | **404** |

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದ ಶಿಕ್ಷಣ ಮಹಾವಿದ್ಯಾಯಗಳಲ್ಲಿನ ಬಿ.ಇಡಿ ಕೋರ್ಸುಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆ ಕುರಿತು.

**ಓದಲಾಗಿದೆ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 131 ಯುಆರ್‌ಸಿ 2000, ದಿನಾಂಕ: 22.07.2000.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು, ಇವರ ಪತ್ರ ಸಂಖ್ಯೆ: ಕರಾಉಶಿಪ/51/ಬಿ.ಇಡಿ/ಎಂ.ಇಡಿ ಶುಲ್ಕ/2022-23, ದಿನಾಂಕ: 04.11.2022.
3. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬೆಂಗಳೂರು ಇವರ ಪತ್ರ ಸಂಖ್ಯೆ: DSERT/DIET/ಬಿ.ಇಡಿ. ಪ.ಶು.ನಿ. ಅ.ಪ.ಸ.ಬ./01/2023-TECD, ದಿನಾಂಕ: 25.09.2023.
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಕಾಶಿಇ/ಶೈವಿ/08/ಬಿಎಡ್ ಶುಲ್ಕ/2022-23, ದಿನಾಂಕ: 21.03. 2024.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ, ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಬೋಧನಾ ಶುಲ್ಕ, ಅಭಿವೃದ್ಧಿ ಶುಲ್ಕ ಮತ್ತು ಇತರೆ ಶುಲ್ಕವನ್ನು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

**Table-1**

Fee Structure in B.Ed course in Government/ University/ Aided/ Private College of Education

| Sl No. | Types of Colleges | Category of seats | Kinds of fee | | |
|---|---|---|---|---|---|
| | | | Tuition | Development | Total |
| 1 | Government/ University | Government | 3000 | Nil | 3000 |
| 2 | Aided | Government seats | 3000 | 1000 | 4000 |
| | | Management seats | 8000 | 5000 | 13000 |
| 3 | Private (Un-Aided) | Government seats | 6000 | 2000 | 8000 |
| | | Management seats | 30000 | 5000 | 35000 |

**Table-2**

Other fees in B.Ed Courses (Common to all Students in all Institutions)

| Sl. No. | Types of Fees | Quantum of fees (in Rs.) |
|---|---|---|
| 1 | Admission fee | 50 |

| | | |
|---|---|---|
| 2 | Reading Room fee | 100 |
| 3 | Sports fee | 75 |
| 4 | Lab fee (For science students) | Physics-70<br>Chemistry-80 |
| 5 | Arts & Drawing | 75 |
| 6 | SUPW | 125 |
| 7 | TBF | 10 |
| 8 | Examination fee | 100 |
| 9 | Citizenship fee | 400 |
| 10 | Medical Exam Fee | 50 |
| 11 | Magazine fee | 50 |
| 12 | Library fee | 150 |
| 13 | Maintenance & Equipment fee | 500 |
| 14 | Lesson Plan records and other records | 200 |
| 15 | Education Technology | 80 |
| 16 | Students Welfare Fund | 10 |
| Total | | 2125 |

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಬಿ.ಇಡಿ ಪದವಿ ಕೋರ್ಸುಗಳಿಗೆ ಶುಲ್ಕ ಪರಿಷ್ಕರಣೆಯ ಕುರಿತು ಕಾರ್ಯನಿರ್ವಾಹಕ ನಿರ್ದೇಶಕರು,ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರು NCTE-2014 ರ ಮಾರ್ಗಸೂಚಿಯನ್ವಯ ಸಮಿತಿ ರಚಿಸಬೇಕಾಗಿದ್ದು, ಸದರಿ ಸಮಿತಿಗೆ ರಾಜ್ಯ ಸರ್ಕಾರದ ವತಿಯಿಂದ ನಾಮನಿರ್ದೇಶನ ಸದಸ್ಯರನ್ನು ನಾಮನಿರ್ದೇಶನಗೊಳಿಸುವಂತೆ ಕೋರಿರುತ್ತಾರೆ.

Composition of committee for fixation of fees as per NCTE regulations 2014 read with NCTE (guidelines for regulations of tuition fees and other fees chargeable by unaided teacher education institutions) Regulations, 2002 and Amendment Regulations 2010-Section (5) :

i. The fees in recognized institutions (other than those institutions offering a teaching education programme leading to a university degree) operating on no grant-in-aid and no grant-in-aid/ self- financing basis shall be determined by the State Level Committee.
ii. The State level committee which may be constituted in every State by the concerned Government shall consist of:

a. Secretary in-charge of Teacher Education of the State Government Chairman;
b. Secretary of the Finance Department of the State Government or his Member;
c. Representative of the Department dealing with physical education, if such a Department exists, to be nominated by the State Government Member;
d. Two experts, one each in Institutional Finance, Cost Accountancy and Economics to be nominated by the State Government Member;



ile No. ED/57/URC/2022-ED_SO_UNI2-EDUCATION HIGHER SEC (Computer No. 692421)

e. One representative of the Private Teacher Training Association; if it exists in the State or a representative of the Teaching Training Institutions in the state, to be nominated by the state Government

f. Director in-charge of Teacher Education of the State Government Member Secretary. The concerned Government may nominate the Director, SCERT or equivalent rank officer dealing with teaching education in the state to serve on the committee.

The term of the office of the members of the State Level Committee constituted as above shall be three years except in case of ex-officio members.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ, ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರು The National Council for Teacher Education, New Delhi, Notification Dated: 25th August, 2010 ರ ತಿದ್ದುಪಡಿ ಅನ್ವಯ ಸೆಕ್ಷನ್ 5(e) ರಂತೆ ಶಿಕ್ಷಣ ಮಹಾವಿದ್ಯಾಲಯಗಳ ಬಿ.ಇಡಿ ಪ್ರವೇಶಾತಿ ಶುಲ್ಕವನ್ನು ಪರಿಷ್ಕರಿಸಲು ಈ ಕೆಳಕಂಡ ಅಧಿಕಾರಿಗಳನ್ನು / ಸದಸ್ಯರುಗಳನ್ನು ನಾಮನಿರ್ದೇಶನಗೊಳಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ, ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ರವರು The National Council for Teacher Education (Guidelines for regulation of tuition fees and other fees chargeable by unaided teacher education institutions) Amendment Regulations, 2010 ರ ಸೆಕ್ಷನ್ 5(c), (d) ರಂತೆ ಶಿಕ್ಷಣ ಮಹಾವಿದ್ಯಾಲಯಗಳ ಬಿ.ಇಡಿ ಪ್ರವೇಶಾತಿ ಶುಲ್ಕವನ್ನು ಪರಿಷ್ಕರಿಸಲು ಅಧಿಕಾರಿಗಳನ್ನು / ಸದಸ್ಯರುಗಳನ್ನು ನಾಮನಿರ್ದೇಶನಗೊಳಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ

ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಹಾಗೂ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರುಗಳು ಪ್ರಸ್ತಾವನೆಯಲ್ಲಿ ಕೋರಿರುವಂತೆ The National Council for Teacher Education (Guidelines for regulation of tuition fees and other fees chargeable by unaided teacher education institutions) Regulations-2002, and Amendment Regulations,2010 ರ ತಿದ್ದುಪಡಿ ಅಧಿಸೂಚನೆಗಳನ್ವಯ ಶಿಕ್ಷಣ ಮಹಾವಿದ್ಯಾಲಯಗಳ ಬಿ.ಇಡಿ ಪ್ರವೇಶಾತಿ ಸಂಬಂಧಿಸಿದಂತೆ ಬೋಧನಾ, ಅಭಿವೃದ್ಧಿ ಮತ್ತು ಮತ್ತಿತರ ಶುಲ್ಕಗಳನ್ನು ಪರಿಷ್ಕರಿಸಲು ಈ ಕೆಳಕಂಡ ಅಧಿಕಾರಿಗಳನ್ನು / ಸದಸ್ಯರುಗಳನ್ನು ರಾಜ್ಯ ಮಟ್ಟದ ಸಮಿತಿಗೆ ನಾಮನಿರ್ದೇಶನಗೊಳಿಸಲು ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 57 ಯುಆರ್‌ಸಿ 2022(ಇ)**
**ಬೆಂಗಳೂರು, ದಿನಾಂಕ: 16 -08-2025**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿ.ಇಡಿ ಕೋರ್ಸುಗಳ ಪ್ರವೇಶಾತಿಗೆ ಬೋಧನಾ ಶುಲ್ಕ, ಅಭಿವೃದ್ಧಿ ಶುಲ್ಕ ಮತ್ತು ಮತ್ತಿತರ ಶುಲ್ಕ ಪರಿಷ್ಕರಿಸುವುದಕ್ಕೆ ಸಂಬಂಧಿಸಿದಂತೆ, **The National Council for Teacher Education (Guidelines for regulation of tuition fees and other fees chargeable by unaided teacher education institutions) Regulations-2002, and Amendment**

**Regulations,2010** ರ ತಿದ್ದುಪಡಿ ಅಧಿಸೂಚನೆಗಳನ್ವಯ ಈ ಕೆಳಕಂಡ ಅಧಿಕಾರಿಗಳನ್ನು/ಸದಸ್ಯರುಗಳನ್ನು ರಾಜ್ಯಮಟ್ಟದ ಸಮಿತಿಗೆ ನಾಮನಿರ್ದೇಶನಗೊಳಿಸಿ ಆದೇಶಿಸಿದೆ.

| ಕ್ರ. ಸಂ. | ಸದಸ್ಯರುಗಳ ಹೆಸರು | |
|---|---|---|
| 1. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು. | ಅಧ್ಯಕ್ಷರು |
| 2. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ. | ಸದಸ್ಯರು |
| 3. | ಶ್ರೀಕಾಂತ ಆರ್., ದೈಹಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವರ್ತೂರು, ಬೆಂಗಳೂರು. | ನಾಮನಿರ್ದೇಶಿತ ಸದಸ್ಯರು |
| 4. | 2. ಡಾ: ಸುಮಾ ಎಸ್., ಸಹ ಪ್ರಾಧ್ಯಾಪಕರು, ವಿಹೆಚ್‌ಡಿ ಗೃಹ ವಿಜ್ಞಾನ ಕಾಲೇಜು, ಬೆಂಗಳೂರು.<br>3. ಡಾ: ಡಿ.ಎಸ್. ಪ್ರತಿಮಾ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು. | ನಾಮನಿರ್ದೇಶಿತ ಸದಸ್ಯರು |
| 5. | ಡಾ|| ಮಧುಮತಿ ಬಿ.ಪಿ.,ಅಧ್ಯಕ್ಷರು, ಕರ್ನಾಟಕ ರಾಜ್ಯ ಅನುದಾನಿತ ಶಿಕ್ಷಣ ಮಹಾವಿದ್ಯಾಲಯಗಳು (ಬಿ.ಇಡಿ ಕಾಲೇಜುಗಳು) ಶಿಕ್ಷಕರ ಸಂಘ (ರಿ). | ನಾಮನಿರ್ದೇಶಿತ ಸದಸ್ಯರು |
| 6. | ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ |

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಆಪ್ತ ಶಾಖೆ.
ಸಂಖ್ಯೆ........
ದಿನಾಂಕ 11 8 AUG 2025

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಸಂಜಯ್ ಬಿ.ಎಸ್.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ).

**ಇವರಿಗೆ,**

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ , ಕೆ.ಜಿ.ರಸ್ತೆ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು
4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ಸಂಬಂಧಿಸಿದ ಸದಸ್ಯರುಗಳಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮುಖಾಂತರ)

6. ಡಾ|| ಮಧುಮತಿ ಬಿ.ಪಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಅನುದಾನಿತ ಶಿಕ್ಷಣ ಮಹಾವಿದ್ಯಾಲಯಗಳು (ಬಿ.ಇಡಿ ಕಾಲೇಜುಗಳು) ಶಿಕ್ಷಕರ ಸಂಘ (ರಿ) ( ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರ ಮುಖಾಂತರ)
7. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು/ ಕುಲಸಚಿವರು, (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ , ಕೆ.ಜಿ.ರಸ್ತೆ, ಬೆಂಗಳೂರು ಮುಖಾಂತರ)
8. ಇ-ಆಡಳಿತ (ಅಂತರ್ಜಾಲದಲ್ಲಿ ಪ್ರಕಟಿಸಲು) / ಶಾಖಾ ರಕ್ಷಾ ಕಡತ

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ / ಪ್ರಧಾನ/ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ ಮತ್ತು ಸಾಮಾನ್ಯ ಶಾಖೆ)


5